ಓ.ಎಸ್.ನಂಃ 180/2021

ಪಿಡಬ್ಲ್ಯೂ-1

<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 14.02.2025 ರಂದು ಪ್ರಮಾಣಿಕರಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲು: ಶ್ರೀ ಹೆಚ್ ಎಸ್ ಪಿ ವಕೀಲರಿಂದಃ</u>

ಒಟ್ಟು ಕುಟುಂಬದಲ್ಲಿ ವಿಭಾಗ ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಯಾವ ವರ್ಷದಲ್ಲಿ ವಿಭಾಗ ಆಯಿತು ನನಗೆ ಗೊತ್ತಿಲ್ಲ. ನನಗೆ ವಿಭಾಗದಲ್ಲಿ ಒಂದು ಆಸ್ತಿಯಲ್ಲಿ 6 ಎಕರೆ, ಒಂದು ಆಸ್ತಿಯಲ್ಲಿ 5 ಎಕರೆ, ಒಂದು ಆಸ್ತಿಯಲ್ಲಿ 1 ಎಕರೆ ಬಂದಿತ್ತು. ದಾವ ಆಸ್ತಿಯು ಸರ್ಕಾರದ ಆಸ್ತಿಯಾಗಿದ್ದು ಅದನ್ನು ನಾನು ವ್ಯವಸಾಯ ಮಾಡುತ್ತಿದ್ದೆ. 1ನೇ ಪ್ರತಿವಾದಿ ತಂದೆ ಕೆಂಪೇಗೌಡರವರು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ಕೆಂಪೇಗೌಡ ನನ್ನ ಸಹೋದರ ಎಂದರೆ ಸರಿ. ದಾವ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸರ್ಕಾರದಿಂದ ನನಗೆ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ಮಕ್ಕಳಿಗೆ ದಾವ ಆಸ್ತಿಯಲ್ಲಿ ಹಕ್ಕು ಇದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ, ಈ ಸಂಬಂಧ ಯಾವುದೇ ಅರ್ಜಿ ಮತ್ತು ತಕರಾರನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಹಕ್ಕು ಖುಲಾಷೆ ಪತ್ರ ಬರೆಸಿಕೊಂಡ ನಂತರ ನನ್ನ ಹೆಂಡತಿ ಮಕ್ಕಳು ಯಾವುದೇ ದಾವೆ ಹೂಡಿರುವುದಿಲ್ಲ. ಸರ್ವೇ ನಂಃ 6/1 ರ 3 ಎಕರೆ 23 ಗುಂಟೆ ನನ್ನ ತಂದೆಗೆ ಕ್ರಯ ಪತ್ರ ಆಗುವ ಮೊದಲು ಕೆಂಪೇಗೌಡ ರವರಿಗೆ ಕ್ರಯ ಪತ್ರವಾಗಿದೆ ಎಂದು ಅದನ್ನು ಪ್ರಶ್ನಿಸಿ ಯಾವುದೇ ದಾವೆ ಹೂಡಿರುವುದಿಲ್ಲ. ಕೆಂಪೇಗೌಡ ರವರ ಹೆಸರಿಗೆ ಕ್ರಯ ಪತ್ರವು ನಮ್ಮ ತಂದೆ ಹೆಸರಿಗೆ ಬದಲಾಗಿ ನೊಂದಣಿ ಆಗಿದೆ ಎಂದು ನಿರೂಪಿಸಲು ನಾನು ನನ್ನ ಸಹೋದರಿಗೆ ಸಾಕ್ಷಿ ವಿಚಾರಣೆಯನ್ನು ನ್ಯಾಯಾಲಯದಲ್ಲಿ ನೀಡುತ್ತೇನೆ.

ಸರ್ವೇ ನಂಃ 6/1 ರಲ್ಲಿ ನನ್ನ ಸಹೋದರ ಮತ್ತು ಸಹೋದರಿಯರಿಗೆ ಅರ್ಧ ವಿಭಾಗ ನೀಡಬೇಕು ಎಂಬ ಬಗ್ಗೆ ನಮ್ಮ ಕುಟುಂಬದಲ್ಲಿ ಮಾತುಕತೆ ಆಗಿತ್ತು,ಆದರೆ ಲಿಖಿತ ದಾಖಲೆ ಇರುವುದಿಲ್ಲ. ಸರ್ವೇ ನಂಃ 6/1 ರ ಆಸ್ತಿಯನ್ನು ನನ್ನ ಸಹೋದರ ಮತ್ತು ಸಹೋದರಿಯರಿಗೆ ಅರ್ಧ ವಿಭಾಗ ನೀಡಬೇಕು ಎಂಬ ಕಾರಣದಿಂದ ದಾವ ಆಸ್ತಿಯಲ್ಲಿ ಕೆಂಪೇಗೌಡ ರವರಿಗೆ

ಕೊಡಬೇಕು ಎಂದು ನಮ್ಮ ಕುಟುಂಬದಲ್ಲಿ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ದಾವ ಆಸ್ತಿಯು ನೀರಾವರಿ ಜಮೀನು ಆಗಿರುವುದಿಲ್ಲ. ಸಾಕ್ಷಿ ಮುಂದುವರಿದು ಮಳೆ ಆಶ್ರಿತ ಜಮೀನು ಆಗಿರುತ್ತದೆ. ದಾವ ಆಸ್ತಿಯನ್ನು ಮಾರಾಟ ಅಥವಾ ವರ್ಗಾವಣೆ ಮಾಡಲು ನನಗೆ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿಯಲ್ಲ. ಈ ರೀತಿ ನನಗೆ ಹಕ್ಕು ಇದುದ್ದರಿಂದ 1ನೇ ಪ್ರತಿವಾದಿ ಪರವಾಗಿ ಹಕ್ಕು ನಿವೃತ್ತಿ ಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ಮತ್ತು ಸಹೋದರಿಯರಿಗೆ ಆಸ್ತಿ ಕಡಿಮೆ ಇತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ಸರ್ವೇ ನಂಃ6/1 ರಲ್ಲಿ ಇಬ್ಬರಿಗೂ ಆಸ್ತಿಯನ್ನು ಕೊಡಬೇಕು ಎಂದು ಕುಟುಂಬದಲ್ಲಿ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಮಾತುಕತೆಯಂತೆ 1ನೇ ಪ್ರತಿವಾದಿ ನನ್ನ ಸಹೋದರ ಮತ್ತು ಸಹೋದರಿಯರಿಗೆ ಸರ್ವೇ ನಂಃ 6/1 ರಲ್ಲಿ ಸಮಾನವಾಗಿ ಕ್ರಯ ಮಾಡಲಾಗಿರುತ್ತದೆ ಎಂದರೆ ಸರಿ. ಮಾರಾಟ ಮಾಡಿರುವುದಕ್ಕೆ ಪ್ರತಿಫಲವಾಗಿ 1ನೇ ಪ್ರತಿವಾದಿಗೆ ಕ್ರಯದ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಹಣವನ್ನು ಕ್ರಯಕ್ಕೆ ಬದಲಾಗಿ ಕೊಡಲಾಗಿದೆ ಎಂದು ರುಜುವಾತು ಪಡಿಸಲು ನಾನು ರಾಮೇಗೌಡರವರ ಸಾಕ್ಷಿ ವಿಚಾರಣೆಯನ್ನು ಮಾಡಿಸಿರುತ್ತೇನೆ.

ಹಣ ಸಂದಾಯದ ಬಗ್ಗೆ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಹಣವನ್ನು ಪಾವತಿ ಮಾಡಿದ ಕಾರಣ ಕ್ರಯ ಪತ್ರ ಮಾಡಿಕೊಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂಃ 6/1 ರ ಆಸ್ತಿಯನ್ನು ನನ್ನ ಸಹೋದರ ಮತ್ತು ಸಹೋದರಿಯರಿಗೆ ಕೊಟ್ಟ ಕಾರಣ ದಾವ ಆಸ್ತಿಗೆ ಸಂಬಂಧಪಟ್ಟಂತೆ 1ನೇ ಪ್ರತಿವಾದಿಗೆ ನಾನು ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಕ್ಕು ನಿವೃತ್ತಿ ಪತ್ರವನ್ನು ದಾವ ಆಸ್ತಿಗೆ ಸಂಬಂಧಪಟ್ಟಂತೆ 1ನೇ ಪ್ರತಿವಾದಿಗೆ ಬರೆದುಕೊಟ್ಟು ಉದ್ದೇಶ ಪೂರ್ವಕವಾಗಿ ದಾವ ಆಸ್ತಿಯನ್ನು ಲಪಟಾಯಿಸಲು ನಾನು ಈ ದಾವೆಯನ್ನು ಸುಮಾರು ವರ್ಷಗಳ ನಂತರ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ಕುಟುಂಬದವರ ತೀರ್ಮಾನದಂತೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುವುದರಿಂದ ಯಾವುದೇ ದಾವೆ ಹೂಡಬೇಡಿ ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದವರ ಮಾತನ್ನು ತಿರಸ್ಕರಿಸಿ ಸುಳ್ಳು ಸಂಗತಿಗಳ ಆಧಾರದ ಮೇಲೆ ಈ ದಾವೆ ಹೂಡಿರುತ್ತೇನೆ ಎಂದರೆ

ಸರಿಯಲ್ಲ.  ಹಕ್ಕು ನಿವೃತ್ತಿ ಪತ್ರಕ್ಕೆ ಸಂಬಂಧಪಟ್ಟಂತೆ ನನಗೆ ಮತ್ತು ನನ್ನ ಕುಟುಂಬದವರಿಗೆ ಮತ್ತು ಹಾಜರಿದ್ದ ಎಲ್ಲರಿಗೂ ಆ ದಿನ ತಿಳಿದಿತ್ತು ಎಂದರೆ ಸರಿಯಲ್ಲ.

ನಾನು ಯಾರ ಒತ್ತಾಯಕ್ಕೆ ಮಣಿಯದೆ ಸ್ವ-ಇಚ್ಚೆಯಿಂದ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟ ನಂತರ ಅದರ ಆಧಾರದ ಮೇಲೆ 1ನೇ ಪ್ರತಿವಾದಿ ದಾವ ಆಸ್ತಿಯ ಮೇಲೆ ಮಾಲೀಕತ್ವ ಮತ್ತು ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕು ನಿವೃತ್ತಿ ಪತ್ರದ ಆಧಾರದ ಮೇಲೆ 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಾವ ಆಸ್ತಿಯನ್ನು ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಿಚಾರ ಇತ್ತೀಚೆಗೆ ಆರ್ ಟಿ ಸಿ ದಾಖಲೆ ಪರಿಶೀಲಿಸಿದಾಗ ನನಗೆ ತಿಳಿಯಿತು ಎಂದು ನುಡಿಯುತ್ತಾರೆ.  ದಾವ ಆಸ್ತಿಯ ಮೇಲೆ ದಾನ ಪತ್ರದ ಆಧಾರದ ಮೇಲೆ 2ನೇ ಪ್ರತಿವಾದಿಗೆ ಹಕ್ಕು ಮಾಲೀಕತ್ವ ಇದೆ ಎಂದರೆ ಸರಿಯಲ್ಲ.  ದಾವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು, ಹಿತಾಶಕ್ತಿ, ಮಾಲೀಕತ್ವ ಮತ್ತು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಾನು ಮಾಡಿಕೊಟ್ಟಿರುವ ಹಕ್ಕು ನಿವೃತ್ತಿ ಪತ್ರ ಕಾನೂನಿಗೆ ಬದ್ದವಾಗಿದ್ದು ಅದನ್ನು ರದ್ದು ಪಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಿಃ17.03.2021ರಂದು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಮಾಡಿಕೊಟ್ಟಿರುವ ದಾನ ಪತ್ರ ಕಾನೂನು ಬದ್ದವಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ